ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪಡಿತರ ಚೀಟಿ ಕೋರಿ ಬಂದಿರುವ ಅರ್ಜಿಗಳು.

1635(2296) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ವರ್ಷ ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಪಡಿತರ ಚೀಟಿ ಕೋರಿ ಬಂದಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ;

ಆ) ಈ ಬಗ್ಗೆ ಎಷ್ಟು ಪಡಿತರ ಚೀಟಿಗಳನ್ನು ಹಂಚಲಾಗಿದೆ. ಉಳಿದ ಪಡಿತರ ಚೀಟಿಗಳನ್ನು ಹಂಚಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ದಿನಾಂಕ: 1-8-98 ರಿಂದ 30-6-99 ರವರೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಪಡಿತರ ಚೀಟಿಯನ್ನು ಕೋರಿ ಒಟ್ಟು 7,164 ಅರ್ಜಿಗಳು ಬಂದಿರುತ್ತವೆ.

ಆ) ಇಲ್ಲಿಯವರೆಗೆ 855 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಇನ್ನು ಒಂದು ತಿಂಗಳಲ್ಲಿ ಈ ಕಾರ್ಯವನ್ನು ಮುಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಭಾರಿ ನೀರಾವರಿ ಯೋಜನೆಗಳು.

1642(2287) ಶ್ರೀ ಕುಂಬ್ಳೆ ಸುಂದರರಾವ್ (ಸುರತ್‌ಕಲ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಾರಿ ನೀರಾವರಿ ಯೋಜನೆಗಳಿಗೆ 1997-98, 1998-99 ಹಾಗೂ 1999-2000ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣವೆಷ್ಟು ;

ಆ) ಬಿಡುಗಡೆ ಮಾಡಿದ ಹಣವೆಷ್ಟು ಹಾಗೂ ವೆಚ್ಚ ಮಾಡಿದ ಹಣವೆಷ್ಟು ; (ವರ್ಷವಾರು ವಿವರ ನೀಡುವುದು)

ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

ಅ) 1997-98 ರಿಂದ 1999-2000 ನೇ ಸಾಲಿನವರೆಗೆ ಭಾರಿ ನೀರಾವರಿ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣ ಬಿಡುಗಡೆ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ.